**O.S. NO.775/ 2014**

**DW.1**

ದಿಃ 21-12-2021 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲು : ಶ್ರೀ. ಎಮ್.ಎನ್.ಸಿ ವಕೀಲರಿಂದ;

ಕರಿಯಪ್ಪ ನಮ್ಮ ಅಜ್ಜ ಎಂದರೆ ಸರಿಯಲ್ಲ. ಸಾಕ್ಷಿಯು ಕರಿಯಪ್ಪ ನನ್ನ ತಂದೆ, ನನ್ನ ಅಜ್ಜ ಸಿದ್ದಲಿಂಗಪ್ಪ ಇರುತ್ತಾರೆ. ದಾವಾ ಆಸ್ತಿಗಳು ಹಿರಿಯರ ಆಸ್ತಿ ಎಂದರೆ ಸರಿ, 2009 ರಲ್ಲಿ ಹಿರಿಯರ ಸಮಕ್ಷಮ ನಮ್ಮ ಪಾಲು ಆಗಿರುತ್ತದೆ ಎಂದರೆ ಸರಿ, ಅಸಲು ದಾವಾ 36/2009 ರಲ್ಲಿ ಆಸ್ತಿ ನಂ.541/1 ಆ ದಾವಾದಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ, ಅದು ಅದನ್ನು ನಾನು ಮತ್ತೆ ನನ್ನ ತಮ್ಮಂದಿರು ಖರೀದಿ ಮಾಡಿರುತ್ತೇವೆ. ಆಸ್ತಿ ನಂ.541/1 ನಾನು ಸನ್ 1978 ರಲ್ಲಿ ಖರೀದಿ ಮಾಡಿರುತ್ತೇನೆ. ನಾನು ಬೇರೆ ಆದ ನಂತರ ಆಸ್ತಿ ನಂ.541/1 ಅನ್ನು ಖರಿದಿ ಮಾಡಿರುತ್ತೇನೆ, ನಾನು ಹಿರಿಯರ ಆಸ್ತಿಯಲ್ಲಿ ನನ್ನ ಪಾಲಿಗೆ ಬಂದಂತಹ ಆಸ್ತಿಯನ್ನು ಅಡಮಾಣೆ ಇಟ್ಟು ಖರೀದಿ ಮಾಡಿರುತ್ತೇನೆ. 1978 ರಲ್ಲಿ ವಾಟ್ನಿ ಆಗಿರುವ ಪತ್ರದ ಬಗ್ಗೆ ಯಾವುದೇ ಕಾಗದ ಪತ್ರಗಳನ್ನು ನಾನು ಹಾಜರು ಮಾಡಿಲ್ಲ 1978 ರಲ್ಲಿ ಪಾಲು ಆಗಿರುವುದಿಲ್ಲ ಆಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆಸ್ತಿ ನಂ.541/1 ಕೌಜಲಗಿ ಗ್ರಾಮದಲ್ಲಿ ಬರುತ್ತದೆ ಎಂದರೆ ಸರಿ. ಆಸ್ತಿ ನಂ.541/1 ಎನ್ ಎ ಆಗುವ ಜಮೀನು ಇರುತ್ತದೆ ಎಂದರೆ ಸರಿ. ಎನ್ ಎ ಮಾಡಿಸಿಕೊಳ್ಳಲು ಓಡಾಡಬೇಕು ಎಂದರೆ ಸಾಕ್ಷಿಯು ಎನ್ ಎ ಮಾಡಿಸಿಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ. ಎನ್ ಎ ಆಗಿ ಪ್ಲಾಟ ಆದರೂ ಸಹ ವಾದಿಗೆ 1/5 ಪಾಲು ಇದೆ ಎಂದರೆ ಸರಿಯಲ್ಲ. ಆಸ್ತಿ ನಂ.541/1 ನಾನು ಅಡಮಾಣಇಟ್ಟು ಖರೀದಿ ಮಾಡಿರುತ್ತೇನೆ ಎಂದು ತೋರಿಸಲು ಕಾಗದ ಪತ್ರ ಹಾಜರು ಮಾಡಿಲ್ಲ ನಾನು ಅಡಮಾಣ ಪತ್ರ ವನ್ನು ಮಾಡಿಸಿಲ್ಲ ಹಾಜರು ಮಾಡಿಲ್ಲ. ಸಾಕ್ಷಿಯು ಪುನಃ ನನ್ನ ಮಕ್ಕಳು ನೀಡಿದ ಹಣದಿಂದ ಆಸ್ತಿ ನಂ.541/1 ಖರೀದಿ ಮಾಡಿರುತ್ತೇನೆ. 1978 ರಲ್ಲಿ ನನ್ನ ಮಕ್ಕಳ ವಯಸ್ಸು, 20,25,21 ಇದ್ದವು. 1978 ರಲ್ಲಿ ಆಸ್ತಿ ನಂ.541/1 20,000/- ಕ್ಕೆ ಖರೀದಿ ಮಾಡಿರುತ್ತೇನೆ. ನನ್ನ ಮಕ್ಕಳು 20,000/- ದುಡಿದು ನನಗೆ ಕೊಟ್ಟಿರುತ್ತಾರೆ ಎಂದು ನಾನು ಯಾವುದೇ ಕಾಗದ ಪತ್ರ ಹಾಜರುಮಾಡಿಲ್ಲ 1974 ರಲ್ಲಿ ರಡರಟ್ಟಿ ಗ್ರಾಮದಲ್ಲಿ ಜಮೀನುಗಳು ನೀರಾವರಿ ಇದ್ದವು ಎಂದರೆ ಸಾಕ್ಷಿಯು ಒಣಭೂಮಿ ಇದ್ದವು ಎಂದು ನುಡಿದಿರುತ್ತಾರೆ, ನಮ್ಮ ಹಿರಿಯರ ಹೊಲದಲ್ಲಿ ಜೊಳ ಮತ್ತು ಕುಸುಬಿ ಬೆಳೆಯುತ್ತಿದ್ದೆವು. ಇದರಿಂದ ಕೆಲವೊಮ್ಮೆ 20 ಚೀಲ ಜೋಳ, ಕುಸುಬಿ ಬರುತ್ತಿತ್ತು. ಒಟ್ಟು ಉತ್ಪನ್ನವನ್ನು ಮನೆಗೆ ತೆಗೆದುಕೊಳ್ಳುತ್ತಿದ್ದೆವು. ಆಗ ಒಂದು ಆಳಿಗೆ ದುಡಿಮೆ ಒಂದು ರೂಪಾಯಿ ಇತ್ತು.

10-15 ವರ್ಷಗಳ ನಂತರ 20,000/- ರೂಪಾಯಿಗಳು ಕೂಡುತ್ತಿದ್ದವು ಎಂದರೆ ಸರಿ. 1974 ರಲ್ಲಿ ವಾದಿಯರು ದುಡಿದಿರುವುದಿಲ್ಲ. ವಾದಿಯವರು ನನಗೆ ಕಾಡುತ್ತಿದ್ದರು ಆದ್ದರಿಂದ ನಾನು 2009 ರಲ್ಲಿ ವಿಭಜನೆಗೆ ದಾವೆಯನ್ನು ಹೂಡಿದ್ದೆ, ಮೂಲ ದಾವೆ 36/2009 ಇದರ ಡಿಕ್ರಿ ಪ್ರಕಾರ ಪೋಡಿ ಇನ್ನು ಆಗಿರುವುದಿಲ್ಲ, ನಾನು ಸರ್ವೇ ನಂ.541/1 ರಲ್ಲಿ ಪಾಲು ಕೊಡುವುದಿಲ್ಲ ಎಂದು ಹೇಳಿದ್ದಕ್ಕೆ ವಾದಿ ಈ ದಾವೆಯನ್ನು ಹೂಡಿರುತ್ತಾನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಮಲ್ಲಪ್ಪ ಅವರ ಮಕ್ಕಳು ಹಾಕಿರುತ್ತಾರೆ, ನನ್ನ ಅಣ್ಣ ಮಲ್ಲಪ್ಪ ಹಾಗೂ ನನ್ನ ಮಧ್ಯೆ 2009 ರಲ್ಲಿ ಪಾಲು ಆಗಿರುವುದಿಲ್ಲ ಎಂದರೆ

ಸರಿಯಲ್ಲ. ವಾದಿಯರಿಗೆ ಪಾಲು ಕೊಡಬೇಕು ಆಗುತ್ತದೆ ಎಂದು ನಾನು ಸ್ವಂತ ಖರೀದಿ ಮಾಡಿರುತ್ತೇನೆ ಎಂದು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಎಲ್ಲಾ ಆಸ್ತಿಗಳು ಜಂಟಿಯಾಗಿ ಇವೆ ಎಂದರೆ ಸರಿಯಲ್ಲ. ಮೂಲ ದಾವೆ 36/2009 ರಲ್ಲಿ ಇದ್ದಂತಹ ಡಿಕ್ರಿಯನ್ನು ಒಂದುಗೂಡಿಸಿ ಈ ಆಸ್ತಿಯಲ್ಲೂ ಪಾಲು ಕೊಡಬೇಕು ಎಂದು ದಾವೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಅವರಿಗೆ ಆಸ್ತಿ ಕೊಡಬೇಕು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ಶೋಭಾ)
ಹೆ.ದಿ.&ನ್ಯಾದಂ., ಗೋಕಾಕ.